**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು**
**ಸಿ.ಸಿ. ನಂ: 378/2021**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | **ಲಕ್ಕಪ್ಪ** | **ಪಿ.ಡಬ್ಲ್ಯೂ-08** |
| **ತಂದೆಯ ಹೆಸರು** | : | **ಗೌರಪ್ಪ** | **ಸಿ.ಡಬ್ಲ್ಯೂ-13** |
| **ವಯಸ್ಸು** | : | **40 ವರ್ಷ** | |
| **ಉದ್ಯೋಗ** | : | **ಮುಖ್ಯ ಪೇದೆ, ಚಿಗಟೇರಿ ಪೊಲೀಸ್ ಠಾಣೆ** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 04.08.2026.** |
| **ವಾಸಸ್ಥಳ** | : | **ಚಿಗಟೇರಿ** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ದಿಃ04.01.2017 ರಿಂದ ದಿಃ13.06.2022 ರವರೆಗೆ ಕೂಡ್ಲಿಗಿ ಸಿ.ಪಿ.ಐ ಕಚೇರಿಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕೆಲಸ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ 18 ರವರು ದಿಃ24.07.2021 ರಂದು ಸಂಜೆ 4.30 ಗಂಟೆಗೆ ನನ್ನನ್ನು ಕೃತ್ಯ ಸ್ಥಳದ ಪಂಚನಾಮೆಯನ್ನು ಮಾಡಿಕೊಂಡು ಬರಲು ಕರೆದುಕೊಂಡು ಹೋಗಿದ್ದು, ಬಂಡ್ರಿ ಗ್ರಾಮದ ಮಾರೆಮ್ಮ ದೇವಸ್ಥಾನದ ಸಂಡೂರು ಕೂಡ್ಲಿಗಿ ಟಾರ್ ರಸ್ತೆಯಲ್ಲಿ ಇಬ್ಬರು ಪಂಚರನ್ನು ಬರಮಾಡಿಕೊಂಡು, ಚಾಸಾ 8 ರವರು ತೋರಿಸಿದ ಕೃತ್ಯ ಸ್ಥಳವನ್ನು ಮತ್ತು ಸ್ಥಳದಲ್ಲಿ ಇದ್ದ ಅಪಘಾತಕ್ಕೆ ಒಳಗಾದ ಹಿರೋ ಫ್ಯಾಶನ್ ಪ್ರೊ ಮೊ.ಸೈ ನಂಃ ಕೆಎ-35-ಇಬಿ-8793 ಹಾಗೂ ಅಪಘಾತ ಪಡೆಸಿದ ಲಾರಿ ನಂಃಕೆಎ-35-ಸಿ-6141 ನೇದ್ದವುಗಳನ್ನು ಪಂಚರ ಸಮಕ್ಷಮ ಸಂಜೆ 5.00 ರಿಂದ ಸಂಜೆ 6.10 ರವರೆಗೆ ಕೃತ್ಯ ಸ್ಥಳ ಪಂಚನಾಮೆಯನ್ನು ಮತ್ತು ಜಪ್ತು ಪಂಚನಾಮೆಯನ್ನು ಪಂಚರು ಹೇಳಿದಂತೆ ಸ್ಥಳದಲ್ಲಿ ಬರೆದು, ಪಂಚರ ಸಹಿ ಮಾಡಿ ಅದಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ.

ನಂತರ ಅದೇ ದಿನ ಚಾಸಾ 18 ರವರು ನನ್ನನ್ನು ಕರೆದುಕೊಂಡು ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಯ ಶವಗಾರ ಕೋಣೆಗೆ ಹೋಗಿ ಇಬ್ಬರು ಪಂಚರನ್ನು

ಬರಮಾಡಿಕೊಂಡು, ಮೃತ ಕೆ.ಬಸವರಾಜ ರವರ ಶವ ಪಂಚನಾಮೆಯನ್ನು ಸಂಜೆ 6.30 ರಿಂದ ರಾತ್ರಿ 8.30 ರವರೆಗೆ ಲ್ಯಾಪಟಾಪನಲ್ಲಿ ತಯಾರಿಸಿ ಕೂಡ್ಲಿಗಿ ಸರ್ಕಾರಿ ಆಸ್ಪತ್ರೆಯಲ್ಲಿ ಪೇನ್ ಡ್ರೈ (Pen Drive) ಸಹಾಯದಿಂದ ಪ್ರಿಂಟ್ ತೆಗೆದು ಪಂಚರ ಸಹಿ ಮಾಡಿಸಿರುತ್ತೇನೆ.

ನಂತರ ಚಾಸಾ 18 ರವರು ಕಲಂ 146(1) ಮತ್ತು (2) ರಡಿಯಲ್ಲಿ ಫಾರಂ ಭರ್ತಿ ಮಾಡಿ ವೈದ್ಯರಿಂದ ಪಿ.ಎಂ ಮಾಡಿಸಿ, ಪಿ.ಎಂ ಮುಗಿದ ನಂತರ ಮೃತರ ಶವವನ್ನು ಸಂಬಂದಪಟ್ಟ ಸಂಬಂಧಿಕರಿಗೆ ಒಪ್ಪಿಸಿ ಸ್ವಿಕೃತಿಯನ್ನು ಪಡೆದುಕೊಂಡು, ವಾಪಸ್ಸು ಕಚೇರಿಗೆ ಬಂದು ಚಾಸಾ18 ರವರಿಗೆ ವರದಿಯನ್ನು ಮಾಡಿರುತ್ತೇನೆ.

ಸಾಕ್ಷಿ ನಿಪಿ-1 ರಲ್ಲಿ ಇರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಡಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಯು.ಎನ್ ವಕೀಲರಿಂದಃ**

ನಿಪಿ1 ರಲ್ಲಿ ಹೊರತುಪಡಿಸಿ ವೈಯಕ್ತಿಕವಾಗಿ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿ. ನಿಪಿ1 ಕ್ಕೆ ಚಾಸಾ2 ಮತ್ತು 3 ರವರು ಪಂಚರಾಗಿ ಸಹಿ ಮಾಡಿರುತ್ತಾರೆ. ಅವರನ್ನು ಪೊಲೀಸ್‌ರಾದ ಸತ್ಯಪ್ಪ ರವರು ಕರೆದುಕೊಂಡು ಬಂದಿರುತ್ತಾರೆ. ಸತ್ಯಪ್ಪ ರವರಿಗೆ ಚಾಸಾ18 ರವರು ಪಂಚರನ್ನು ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಚಾಸಾ18 ರವರು ಸತ್ಯಪ್ಪ ರವರಿಗೆ ಯಾವುದೇ ನಿರ್ದೇಶನ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಕೃತ್ಯ ಸ್ಥಳದ ಪಶ್ಚಿಮ ದಿಕ್ಕಿಗೆ ಬಂಡ್ರಿ ಗ್ರಾಮದ ಹನುಮಂತಪ್ಪ ರವರ ಹೊಲ ಇರುತ್ತದೆ. ಕೃತ್ಯ ಸ್ಥಳ ತೀರುವಿನಿಂದ ಕೂಡಿರುತ್ತದೆ ಎಂದರೆ ಸರಿ. ಶವ ಪಂಚನಾಮೆಯನ್ನು ಸಂಜೆ ಸಮಯದಲ್ಲಿ ಮಾಡಲು ಕಾನೂನು ಅಡಿಯಲ್ಲಿ ಅವಕಾಶ

ಇರುವುದಿಲ್ಲ ಎಂದರೆ ಸರಿಯಲ್ಲ. ಶವ ಪಂಚನಾಮೆಯನ್ನು ಬೆಳಕಿನ ಸಹಾಯದಿಂದ ಮಾಡಿರುತ್ತೇನೆ ಎಂದು ಅದರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಬರೆಯಲು ಚಾಸಾ18 ರವರು ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಹೋಗಿರುವುದಿಲ್ಲ, ಪಂಚರ ಸಮಕ್ಷಮ ಯಾವುದೇ ಪಂಚನಾಮೆಯನ್ನು ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಪಂಚರ ಸಹಿಯನ್ನು ಠಾಣೆಯಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಮೃತರ ಕುಟುಂಬಕ್ಕೆ ಅನಕುಲವಾಗಲಿ ಎಂದು ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**